# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 529 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ | 20-02-2023 |
| 4) | ಉತ್ತರಿಸುವವರು | ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು. |

************

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಥಾಮಸ್ ವರದಿ ಶಿಫಾರಸ್ಸನ್ನು ಜಾರಿಗೊಳಿಸಲು ಸರ್ಕಾರ ಯಾವಾಗ ಒಪ್ಪಿಗೆ ಸೂಚಿಸಿದೆ; | ಶ್ರೀ ಪಿ.ಎಸ್.ಎಸ್ ಥಾಮಸ್ ವರದಿಯ ಶಿಫಾರಸ್ಸಿನ ಅನ್ವಯ ಈ ಕೆಳಕಂಡ ಸರ್ಕಾರದ ಆದೇಶಗಳಂತೆ ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ವಿವಿಧ ಸೌಲಭ್ಯಗಳನ್ನು ನೀಡಲಾಗಿರುತ್ತದೆ.<br>1. ಸರ್ಕಾರಿ ಆದೇಶ ಸಂಖ್ಯೆ: ಕಾಇ 303 ಇಟಿಐ 2014, ದಿನಾಂಕ: 29.12.2014 ರಲ್ಲಿ ಹಾಗೂ<br>2. ಸರ್ಕಾರಿ ಆದೇಶ ಸಂಖ್ಯೆ: ಕಾಇ 303 ಇಟಿಐ 2014, ದಿನಾಂಕ: 14.11.2016. |
| (ಆ) | ಸದರಿ ಶಿಫಾರಸ್ಸಿನಂತೆ ಇದುವರೆಗೂ ಯಾವ ಯಾವ ಸೌಲಭ್ಯಗಳನ್ನು ನೌಕರರಿಗೆ ಕಲ್ಪಿಸಲಾಗಿದೆ; | ಸರ್ಕಾರಿ ಆದೇಶ ಸಂಖ್ಯೆ: ಕಾಇ 303 ಇಟಿಐ 2014, ದಿನಾಂಕ: 29.12.2014 ರಂತೆ ಶ್ರೀ ಪಿ.ಎಸ್.ಎಸ್ ಥಾಮಸ್ ವರದಿಯ ಶಿಫಾರಸ್ಸಿನನ್ವಯ ರಾಜ್ಯದಲ್ಲಿನ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗೆ ಇರುವಂತೆ ಪಿಂಚಣಿ, ಗ್ರಾಚ್ಯುಯಿಟಿ ಸೇವಾ ಸೌಲಭ್ಯಗಳು ಹಾಗೂ ಸೇವಾ ನಿಯಮಗಳನ್ನು ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಿಬ್ಬಂದಿಗೆ ಭವಿಷ್ಯವರ್ತಿಯಾಗಿ (Prospective) ನೀಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ಸದರಿ ಸೌಲಭ್ಯಗಳನ್ನು ಅನುದಾನಿತ ನೌಕರರಿಗೆ ಕಲ್ಪಿಸಲಾಗಿದೆ.<br>ಸರ್ಕಾರಿ ಆದೇಶ ಸಂಖ್ಯೆ: ಕಾಇ 303 ಇಟಿಐ 2014, ದಿನಾಂಕ: 14.11.2016 ರಲ್ಲಿ ಹೆಚ್ಚುವರಿ ಸೌಲಭ್ಯಗಳಾದ 10 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿ, 15 ವರ್ಷಗಳ ಸ್ವಯಂಚಾಲಿತ ವೇತನ ಮುಂಬಡ್ತಿ, 20-25 ವರ್ಷಗಳ ಹೆಚ್ಚುವರಿ ವೇತನ ಬಡ್ತಿ, ಪಿಂಚಣಿ, ಕುಟುಂಬ ಪಿಂಚಣಿ, ಗ್ರಾಚ್ಯುಯಿಟಿ (ನಿವೃತ್ತಿ ಉಪದಾನ)/ ಡಿಸಿಆರ್‌ಜಿ (ಮರಣ ಉಪದಾನ), ಗಳಿಕೆ ರಜೆ ನಗದೀಕರಣ (ನಿವೃತ್ತಿ ನಂತರ) ಸೌಲಭ್ಯಗಳನ್ನು ನೀಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ಸದರಿ ಸೌಲಭ್ಯಗಳನ್ನು ಅನುದಾನಿತ ನೌಕರರಿಗೆ ಕಲ್ಪಿಸಲಾಗಿದೆ. |
| (ಇ) | ಸರ್ಕಾರದ ಒಪ್ಪಿಗೆಯಂತೆ ಇದುವರೆಗೂ ಕಲ್ಪಿಸದಿರುವ ಸೌಲಭ್ಯಗಳಾವುವು; (ವಿವರಗಳೊಡನೆ ಮಾಹಿತಿ ನೀಡುವುದು) | ಇಲ್ಲ. |
| (ಈ) | ಸದರಿ ಸೌಲಭ್ಯಗಳನ್ನು ಯಾವ ಕಾಲಮಿತಿಯಲ್ಲಿ ಕಲ್ಪಿಸಲಾಗುವುದು? | ಅನ್ವಯಿಸುವುದಿಲ್ಲ. |

**ಸಂಖ್ಯೆ: ಕೌಉಜೀಇ 12 ಕೈತಪ್ರ 2023**

(ಡಾ. ಅಶ್ವಥ್ ನಾರಾಯಣ ಸಿ.ಎನ್.)
ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ವಿದ್ಯುನ್ಮಾನ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಸಚಿವರು.